ಕಥೆ ಮತ್ತು ಪ್ರಬಂಧ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ದೀಪಾ ಫಡ್ಕೆ ಲೇಖಕಿ, ನಿರೂಪಕಿ ಮತ್ತು ಗಾಯಕಿ ಕೂಡ. ಕರ್ನಾಟಕ ಸಂಗೀತ ಮತ್ತು ಹಿಂದುಸ್ಥಾನಿ ಸಂಗೀತವನ್ನೂ ಬಲ್ಲವರು. 'ಪುರಂದರ ಕನಕರ ಕೀರ್ತನೆಗಳಲ್ಲಿ ಅಭಿವ್ಯಕ್ತಿ: ಮನೋವೈಜ್ಞಾನಿಕ ಅಧ್ಯಯನ' ನಡೆಸಿ ಡಾಕ್ಟರೇಟ್ ಪಡೆದಿದ್ದಾರೆ. 'ಋತ', 'ಹರಪನಹಳ್ಳಿ ಭೀಮವ್ವ', 'ಲೋಕಸಂವಾದಿ' ಅವರ ಪ್ರಕಟಿತ ಕೃತಿಗಳು. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯವರು. ಪ್ರಸ್ತುತ ಬೆಂಗಳೂರು ನಿವಾಸಿ.

ತೀರದ ಮೋಹವೇ ಬೆಳೆದಿತ್ತು. ನಗರ ನೀಡುವ ಅನಾಮಿಕತೆ ನಮ್ಮನ್ನೆಲ್ಲ ಎಷ್ಟು ಹಗುರ ಮಾಡಿತ್ತೆಂದರೆ ಊರಿನಲ್ಲಿ ಮುಸುಕಾಗಿದ್ದ ಆತ್ಮವಿಶ್ವಾಸ ಇಲ್ಲಿ ಕಾಣತೊಡಗಿತ್ತು. ನಗರದಲ್ಲಿ ಎಷ್ಟೇ ಪರಿಚಿತರಾದರೂ ಒಂದು ಹಂತದ ನಂತರ ಭಾವವಲಯದೊಳಗೆ ನುಸುಳುವ ಅಪಾಯವಿಲ್ಲ ಎಂದೇ ನನ್ನ ಅನುಭವ. ತಂತಮ್ಮ ಬೌಂಡರಿಯೊಳಗೆ ಬದುಕುವ ಶಿಸ್ತು ಕಲಿಸಿದ ನಗರ ಜೀವನ ನನಗೆ ಅಪ್ಯಾಯಮಾನವಾಗಿದೆ. ಬೆಂಗಳೂರಿನ ನನ್ನ ಸ್ನೇಹಿತರು 'ಓಹ್ ನಿಮ್ಮೂರು ಅದೆಷ್ಟು ಚೆಂದ. ಹಸಿರೊ ಹಸಿರಪ್ಪ, ಎಷ್ಟು ಸೈಲೆಂಟ್ ಆಗಿರತ್ತೆ ನಿಮ್ಮೂರು. ಈ ಗಲಾಟೆ ಗೌಜಿ ಯಾವುದೂ ಇಲ್ಲ. ನಾನಾಗಿದ್ರೆ ಅಲ್ಲೇ ಇರ್ತಿದ್ನೋ ಏನೊ' ಎಂದವರ ಮಾತಿಗೆ ಸುಮ್ಮನೆ ನಕ್ಕು ಬಿಡುತ್ತಿದ್ದೆ.

ಬೆಳ್ಬೆಳಿಗ್ಗೆ ಐದೂವರೆಗೆಲ್ಲ ತನ್ನ ಲಟಾರಿ ಸ್ಕೂಟರಿನಲ್ಲಿ ಸದ್ದು ಮಾಡಿಕೊಂಡು ಬಂದು ರಸ್ತೆಯ ಅಷ್ಟೂ ಜನರನ್ನು ಎಬ್ಬಿಸುವ ಹಾಲಿನ ಮಂಜಣ್ಣ, ರಪ್ ರಪ್ ಎಂದು ದಿನಪತ್ರಿಕೆಗಳನ್ನು ಸುರುಳಿಯಾಗಿಸಿ ಎಸೆದು ಹೋಗುತ್ತಿದ್ದ ಪೇಪರ್ ಹುಡುಗರು, ಏಳೂವರೆಯಿಂದಲೇ 'ಕಿಕ್ ಕೀಕ್' ಎಂದು ಹಾರ್ನಿನ ಸದ್ದು ಮಾಡುತ್ತಾ ಬರುವ ಸ್ಕೂಲಿನ ವ್ಯಾನುಗಳು. ಒಂದ್ರಾಶಿ ಮಕ್ಕಳು, ಅವರ ಅಪ್ಪ ಮಮ್ಮ, ಹೂ, ಸೊಪ್ಪು ಮಾರುವವರು ಮತ್ತೂ ಹೊರಗಿನ ಟ್ರಾಫಿಕ್ಕೂ ಮತ್ತು ಬದುಕಿಗಾಗಿ ನಡೆಸುವ ಬಿಡುವಿಲ್ಲದ ಹೋರಾಟಗಳು, ನಿರಂತರ ಚಟುವಟಿಕೆಗಳು ಹೀಗೆ ವಿವಿಧ ಸದ್ದಿನ ಗದ್ದಲ ಮತ್ತು ಜನಜೀವನದ ನಿತ್ಯದ ಪಡಿಪಾಟಲು ಅಭ್ಯಾಸವಾಗಿ ಈ ಅವಸರವೇ ಸುಖವಾಗಿ, ಈ ಶಬ್ದಗಳೇ ನಿಜವಾದ ನಿಶ್ಶಬ್ದವೆನ್ನುವಂತೆ ಮಾಡಿಬಿಟ್ಟಿದೆ. ಮತ್ತೆ ಆ ಗದ್ದಲವನ್ನು ನೋಡಿಕೊಂಡೇ ಅದರ ನಡುವೆಯೇ ಏಕಾಂತವೂ ಸಿದ್ಧಿಸಿದೆ. ತರಕಾರಿ ಗಾಡಿಯ ರಾಜೇಂದ್ರನ ಗಡಸು ದನಿಯ ತರ್..ಕಾರಿ.. ಕೂಗು ನಿತ್ಯ ಪಾರಾಯಣದ ಭಾಗವೇ ಆಗಿದೆ. ಶಬ್ದ, ಒಂದು ಸುರಕ್ಷತೆಯ ಭಾವ ಹುಟ್ಟಿಸಿ ಬಿಟ್ಟಿದೆ. ಮೂರು ದಶಕಗಳ ನಗರದ ಬದುಕು ಊರಿನ ನೆನಪುಗಳನ್ನು ನಿಧಾನಕ್ಕೆ ಅಳಿಸುತ್ತಾ ನಗರದ ಗಿಜಿಗುಟ್ಟುವ ಬದುಕೇ ಸತ್ಯ ಎನ್ನುವ ಶಮವನ್ನು ಸೃಷ್ಟಿಸಿಬಿಟ್ಟಿದೆ. ಅಲ್ಲದೇ ಈ ಬೆಂಗಳೂರು ಒಮ್ಮೊಮ್ಮೆ ನಿದ್ದೆಯೇ ಮಾಡುತ್ತಿಲ್ಲವೋ ಏನೋ ಎನ್ನುವಂತೇ ರಾತ್ರಿ ಮೂರನೇ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದವರು ಎರಡೂವರೆಗೆಲ್ಲ ಕಾರಿನಲ್ಲಿ ಬಂದಿಳಿಯುವ ಹೊತ್ತಿಗೆ ಬೆಳಗಿನ ಮೊದಲ ಪಾಳಿಯವರು ತಯಾರಾಗಿ ಹೋಗುತ್ತಿದ್ದುದೂ ಇತ್ತಲ್ಲವೇ. ದಶಕಗಳ ಕಾಲ ಮಲಗದೇ ಆವರ್ತಗಳಲ್ಲಿ ತನ್ನ ಮಡಿಲಲ್ಲಿರುವವರನ್ನು ಪೊರೆಯುತ್ತಿರುವ ಬೆಂಗಳೂರು ನನ್ನದೇ ಆಗಿ ಬಿಟ್ಟಿದೆ.

ಹೀಗಿರುವಾಗ ನನ್ನವರು ಏಕಾಏಕಿ ತನ್ನ ಕಂಪೆನಿಯ ಸಿಇಒ ಜೊತೆಗಿನ ಭಿನ್ನಾಭಿಪ್ರಾಯದಿಂದ ಕೆಲಸಕ್ಕೆ ರಾಜೀನಾಮೆ ನೀಡಿದ ಮೇಲೆ ತಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಊರಿಗೆ ಹೋದಾಗ ಉಳಿದುಕೊಳ್ಳಲೆಂದು ಪುಟ್ಟ ಮನೆ ಕಟ್ಟಿದ್ದಷ್ಟೇ ಅಲ್ಲದೇ ತಿಂಗಳಿಗೊಮ್ಮೆ ಹೋಗಿ ಇರಲೂ ಆರಂಭಿಸಿದರು. ಎಂಜಿನಿಯರಿಂಗ್ ಓದುತ್ತಿದ್ದ ಮಗಳಿಗೆ ಊಟ, ಓದಿಗೆ ತೊಂದರೆಯಾಗುತ್ತದೆನ್ನುವ ಕಾರಣದಿಂದ ನಾವಿಬ್ಬರು ಬೆಂಗಳೂರಿನಲ್ಲೇ ಇರುತ್ತಾ ಪತಿ, ಒಬ್ಬರೇ ಹೋಗಿದ್ದುಕೊಂಡು ತೋಟದ ಕೆಲಸಗಳನ್ನು ಪೂರೈಸಿಕೊಂಡು ಬರುತ್ತಿದ್ದರು. ಊರಿಂದ ಬರುವಾಗ ಕಾರು ತುಂಬಾ ತರುತ್ತಿದ್ದ ಹಣ್ಣು ತರಕಾರಿಗಳಿಂದ ನನಗೆ ಖುಷಿಯಾಗುತ್ತಿತ್ತು. 'ಓಯ್ ಈ ಸಾರಿ ತೆಂಗಿನಕಾಯಿ ಮರೀಬೇಡಿ ಮಾರ್ರೇ, ಊರಿನ ತೆಂಗಿನಕಾಯಿಯಷ್ಟು ಒಳ್ಳೆದು ಇಲ್ಲೆಲ್ಲಿ ಸಿಗತ್ತೆ' ಎಂದು ಹೇಳುತ್ತಲೇ ಊರಿನ ಕಾಯಿಯೆಂದು ಖುಷಿಯಿಂದ ಸಾಂಬಾರು ಮಾಡುತ್ತಿದ್ದೆ. ಊರಿನಿಂದ ಸಿಗುವ ಹಿತಗಳನ್ನು ಅನುಭವಿಸಿಕೊಂಡು ನಗರದಲ್ಲೇ